**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.**

**<u>ಸಿ.ಸಿ.ನಂ. 123/2021</u>**

ದಿನಾಂಕಃ **18-11-2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು ಃ | ದಿನೇಶ ಬಿ ವಿ | ಚಾಸಾ-3, ಪ್ರಾಸ-3 |
| ತಂದೆಯ ಹೆಸರು ಃ | ವಸಂತಪ್ಪ ಬಿ ಬಿ | |
| ವಯಸ್ಸು ಃ | 37 ವರ್ಷ | |
| ಉದ್ಯೋಗ ಃ | ಪೋಲಿಸ್ ಪೇದೆ | |
| ವಾಸ ಃ | ಸಖರಾಯಪಟ್ಟಣ | |

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>

ನಾನು 2016 ರಿಂದ 2020 ರವರೆಗೆ ನಾನು ಸಖರಾಯಪಟ್ಟಣ ಠಾಣೆಯಲ್ಲಿ ಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕ 01.05.2020 ರಂದು ನಾನು ಠಾಣೆಯಲ್ಲಿ ಇರುವಾಗ ಚಾಸಾ-1 ರವರಿಗೆ ಬಾತ್ಮಿದಾರರಿಂದ ಹೊಸ ಸಿದ್ದರಹಳ್ಳಿಯಲ್ಲಿ ಯಾರೋ ಆಸಾಮಿ ಅಕ್ರಮವಾಗಿ ಕಳ್ಳಬಟ್ಟಿಯನ್ನು ತಯಾರಿಸಿ ಮಾರಾಟ ಮಾಡುತ್ತಿರುತ್ತಾರೆ ಎಂದು ಮಾಹಿತಿ ತಿಳಿಸಿದ್ದು, ಸದರಿ ಮಾಹಿತಿಯನ್ನು ನಮಗೆ ತಿಳಿಸಿ ಅದರ ಆಧಾರದ ಮೇರೆಗೆ ನಾನು, ಚಾಸಾ-2 ಮತ್ತು 4 ರವರು ಚಾಸಾ-1 ರವರೊಂದಿಗೆ ಖಾಸಗಿ ವಾಹನದಲ್ಲಿ ಹಳೆಸಿದ್ದರಹಳ್ಳಿಯ ಬಳಿ ಹೋಗಿ ಅಲ್ಲಿ ರಸ್ತೆಯಲ್ಲಿ ಹೋಗುತ್ತಿದ್ದ ಇಬ್ಬರು ಆಸಾಮಿಗಳನ್ನು ಪರಿಚಯ ಮಾಡಿಕೊಂಡು ದಾಳಿಯ ಬಗ್ಗೆ ತಿಳಿಸಿ ಸದರಿಯವರು ಒಪ್ಪಿದ ಮೇರೆಗೆ ನೋಟೀಸನ್ನು ಚಾಸಾ-1 ರವರು ಜಾರಿ ಮಾಡಿರುತ್ತಾರೆ.

ನಂತರ ಪಂಚರನ್ನು ಜೊತೆಯಲ್ಲಿಯೇ ಕರೆದುಕೊಂಡು ಆರೋಪಿಯ ಮನೆಯ ಬಳಿ ಹೋಗಿ ನೋಡಿದಾಗ ನಮ್ಮನ್ನು ನೋಡಿ ಒಬ್ಬ ವ್ಯಕ್ತಿಯ ಓಡಿಹೋಗಿರುತ್ತಾನೆ. ಪಂಚರನ್ನು ಓಡಿಹೋದ ವ್ಯಕ್ತಿಯ ಬಗ್ಗೆ ವಿಚಾರಿಸಲಾಗಿ, ಓಡಿಹೋದ ವ್ಯಕ್ತಿಯ ಹೆಸರು ಮಹೇಶ್ ಎಂಬುದಾಗಿ ನನಗೆ ತಿಳಿಸಿರುತ್ತಾರೆ. ನಂತರ ಮನೆಯ ಪಕ್ಕದಲ್ಲಿ ಪರಿಶೀಲಿಸಿ ನೋಡಲಾಗಿ, 750 ಎಂ.ಎಲ್.ನ ಸ್ಪ್ರೈಟ್ ನ ಪ್ಲಾಸ್ಟಿಕ್ ಬಾಟಲು ನಮಗೆ ಸಿಕ್ಕಿರುತ್ತದೆ. ಅದನ್ನು ತೆರೆದು ನೋಡಲಾಗಿ ಅದರೊಳಗೆ ಕಳ್ಳಬಟ್ಟಿ ಇರುವುದು ಕಂಡುಬಂದಿರುತ್ತದೆ. ಅದರ ಪಕ್ಕದಲ್ಲಿ ಪ್ಲಾಸ್ಟಿಕ್ ಬಿಂದಿಗೆ ಇರುವುದು ಕಂಡುಂಬಂದಿರುತ್ತದೆ. ಅದನ್ನು ಪರಿಶೀಲಿಸಿ ನೋಡಲಾಗಿ ಅದರಲ್ಲಿ ಬೆಲ್ಲವನ್ನು ಕೊಳೆಯಲು ಇಟ್ಟಿರುವುದು ಕಂಡುಬಂದಿರುತ್ತದೆ. ಸದರಿ ವಿಚಾರವಾಗಿ ಚಾಸಾ-1 ರವರು ಸ್ಥಳದಲ್ಲಿಯೇ ವರದಿಯನ್ನು ತಯಾರಿಸಿ ಚಾಸಾ-2 ರವರ ಹಸ್ತ ಠಾಣೆಗೆ ಕಳುಹಿಸಿ ಪ್ರ.ವ.ವರದಿಯನ್ನು ದಾಖಲಿಸಿಕೊಂಡು ಬರುವಂತೆ ತಿಳಿಸಿರುತ್ತಾರೆ.

ನಂತರ ಚಾಸಾ-2 ರವರು ಪ್ರ.ವ.ವರದಿಯನ್ನು ದಾಖಲಿಸಿಕೊಂಡು ಪುನಃ ಅದನ್ನು ತೆಗೆದುಕೊಂಡು ಘಟನಾ ಸ್ಥಳಕ್ಕೆ ಬಂದಿದ್ದು, ನಂತರ ಪಂಚರ ಸಮಕ್ಷಮ ಸಂಜೆ 6.00 ಗಂಟೆಯಿಂದ 7.00 ಗಂಟೆಯವರೆಗು ನಿಪಿ-

3 ರಂತೆ ಮಹಜರು ಕ್ರಮ ಜರುಗಿಸಿ, ಛಾಯಾಚಿತ್ರವನ್ನು ತೆಗೆಸಿರುತ್ತಾರೆ. ಸಾಕ್ಷಿಯು ನಿಪಿ-3 ರ ಮಹಜರನ್ನು ನೋಡಿ ಗುರುತಿಸಿದ್ದು ಸಾಕ್ಷಿ ಸಹಿಯನ್ನು ನಿಪಿ.3(ಸಿ) ಎಂದು ಗುರುತಿಸಲಾಯಿತು. ಮಹಜರ್ ಸಮಯದಲ್ಲಿ ತೆಗೆದಿರುವ ನಿಪಿ-4 ರ ಛಾಯಾಚಿತ್ರವನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮುಮಾ-1 ಮತ್ತು 2 ನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಮುಮಾ-1 ಮತ್ತು 2 ನ್ನು ಬಿಳಿ ಬಟ್ಟೆಯಲ್ಲಿ ಸುತ್ತಿ ಪಿ ಎಂಬ ಅಕ್ಷರದಿಂದ ಸೀಲು ಮಾಡಿ ವಶಪಡಿಸಿಕೊಂಡಿರುತ್ತಾರೆ. ಈ ಸಂಬಂಧ ಚಾಸಾ-1 ರವರಿಗೆ ಹೇಳಿಕೆ ನೀಡಿರುತ್ತೇನೆ. ಆರೋಪಿ ಗೈರುಹಾಜರಾಗಿದ್ದು ಆರೋಪಿಯ ಗುರುತಿಸುವಿಕೆ ಬಗ್ಗೆ ತಕರಾರು ಇಲ್ಲಾ ಎಂದು ಆರೋಪಿ ಪರ ವಕೀಲರು ನುಡಿದಿರುತ್ತಾರೆ.

<u>ಪಾಟೀಸವಾಲುಃ ಶ್ರೀ ಸಿ ಬಿ ಆರೋಪಿ ಪರ ವಕೀಲರಿಂದಃ</u>

ಠಾಣೆಯಿಂದ 3.00 ಗಂಟೆಗೆ ಹೊರಟು ಸ್ಥಳಕ್ಕೆ 3.30 ಕ್ಕೆ ತಲುಪಿರುತ್ತೇವೆ. ಹಳೇ ಸಿದ್ದರಹಳ್ಳಿಗೂ ಹೊಸ ಸಿದ್ದರಹಳ್ಳಿಗೂ 1 ಕಿಮಿ ಅಂತರ ಇರುತ್ತದೆ. ಠಾಣೆಯಿಂದ 3.00 ಗಂಟೆಗೆ ಹೊರಟಿರುತ್ತೇವೆ, ನನ್ನ ಜೊತೆ 4 ಜನ ಇದ್ದರು. ನಾವು ಪ್ರಯಾಣ ಮಾಡಿದ್ದ ನೋಂದಣಿ ಸಂಖ್ಯೆ ಮತ್ತು ಚಾಲಕನ ವಿವರ ನನಗೆ ಗೊತ್ತಿಲ್ಲ. ಸದರಿ ಕಾರು ಯಾವುದು ಎಂದು ನನಗೆ ಗೊತ್ತಿಲ್ಲ. ನಾನು ಇತ್ತೀಚೆಗೆ ನಾಲ್ಕು ಬಾರಿ ಹೊಸ ಸಿದ್ದರಹಳ್ಳಿ ಗ್ರಾಮಕ್ಕೆ ಭೇಟಿ ನೀಡಿರುತ್ತೇನೆ. ಅಲ್ಲಿ ಸುಮಾರು 40 ಮನೆಗಳು ಇರುತ್ತವೆ. ಮಂಜಮ್ಮನ ಮನೆಯನ್ನು ನಿಮಗೆ ಯಾರು ತೋರಿಸಿರುತ್ತಾರೆ ಎಂದರೆ ಸಾಕ್ಷಿ ಚಾಸಾ-1 ರವರು ನಮ್ಮನ್ನು ಕರೆದುಕೊಂಡು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ನ್ಯಾಯಾಲಯದ ಮುಂದಿರುವ ಮುಮಾ ಗಳು ಬೇರೆ ಬೇರೆ ಪ್ರಕರಣಕ್ಕೆ ಸಂಬಂಧಿಸಿದಂತೆ ನಮ್ಮ ಇಲಾಖೆಯಲ್ಲಿ ಇರುತ್ತವೆ ಎಂದರೆ ಸರಿ. ಆರೋಪಿಯು ನಮ್ಮಿಂದ ಸುಮಾರು 30 ಅಡಿ ದೂರದಿಂದ ಓಡಿ ಹೋಗಿರುತ್ತಾನೆ. ಆತ ಯಾವ ಬಣ್ಣದ ಬಟ್ಟೆ ಧರಿಸಿದ್ದ ಎಂದು ನನಗೆ ನೆನಪಿಲ್ಲ. ಆರೋಪಿಯನ್ನು ಘಟನಾ ಪೂರ್ವದಲ್ಲಿ ನಾನು ನೋಡಿರುವುದಿಲ್ಲ. ಆರೋಪಿಯು ಕಳ್ಳಭಟ್ಟಿಯನ್ನು ಯಾರಿಗೆ ಮಾರಾಟ ಮಾಡಿರುತ್ತಾರೆ ಎಂಬ ಮಾಹಿತಿಯನ್ನು ನಾವು ಕಲೆ ಹಾಕಿರುವುದಿಲ್ಲ. ಆರೋಪಿಯ ವಿವರ ನಿಮಗೆ ತಿಳಿಯಿತು ಎಂದರೆ ಸಾಕ್ಷಿಯು ಪಂಚರು ನಮಗೆ ಆರೋಪಿಯ ವಿವರವನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿ ಯಾವುದೇ ತಪ್ಪನ್ನು ಮಾಡದಿದ್ದರೂ ಸಹ ಆತನಿಗೆ ತೊಂದರೆ ನೀಡಲು ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಮುಮಾಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲಾ ಎಂದರೆ ಸರಿಯಲ್ಲ. ಪಂಚರು ಹಳೇ ಸಿದ್ದರಹಳ್ಳಿಯ ವಾಸಿಗಳು. ವರದಿಯನ್ನು ಯಾರು ತಯಾರು ಮಾಡಿರುತ್ತಾರೆ ಎಂದು ನನಗೆ ನೆನಪಿಲ್ಲ. ವರದಿಯನ್ನು 4.15 ರಿಂದ 5.15 ರವರೆಗೆ ತಯಾರು ಮಾಡಿರುತ್ತಾರೆ. ಮಹಜರನ್ನು 6.15 ರಿಂದ 7.15 ರವರೆಗೆ ಮಾಡಿರುತ್ತಾರೆ. ಆ ಸಮಯದಲ್ಲಿ ಸಾರ್ವಜನಿಕರು ಸೇರಿದ್ದರು ಎಂದರೆ ಸರಿ. ಸದರಿ ಸ್ಥಳದಲ್ಲಿ 5 ರಿಂದ 10 ಜನ ಸೇರಿದ್ದರು. ಠಾಣಾ ಅಂಕಿ ಅಂಶದ ಸಲುವಾಗಿ ಸುಳ್ಳು ಪ್ರಕರಣ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.

ಚಾಸಾ-1 ರವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

Sd/-
2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.